

ಮುಂಗಾರು ಮಳೆ ರಭಸದಿಂದ ಸುರಿಯುತ್ತಿದೆ. ಮಲೆನಾಡು, ಕರಾವಳಿ ಸೇರಿದಂತೆ ಕೆಲವೆಡೆ ಪ್ರವಾಹವನ್ನು ಉಂಟುಮಾಡಿದೆ. ನದಿಗಳಲ್ಲಿ ಹರಿವು ಹೆಚ್ಚಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಲ್ಲಲ್ಲಿ ಕುಸಿತದ ಪ್ರಕರಣಗಳು ವರದಿಯಾಗುತ್ತಿವೆ. ಮಳೆಗಾಲ ಇನ್ನೂ ಮುಗಿದಿಲ್ಲ. ಭಾರೀ ಮಳೆ ಮುಂದುವರೆದರೆ, ಅನಾಹುತ ಮತ್ತಷ್ಟು ಘೋರವಾಗಲಿದೆ.

‘ಸರ್ವರ ಶಕ್ತಿ ಪೀಠ’ ಎನ್ನುವುದು ಪಶ್ಚಿಮಘಟ್ಟಗಳ ಹೆಗ್ಗಳಿಕೆ. ವಯಸ್ಸಿನಲ್ಲಿ ಹಿಮಾಲಯಕ್ಕೂ ಹಿರಿಯಣ್ಣ ಎನ್ನಿಸಿಕೊಂಡಿರುವ ಪಶ್ಚಿಮಘಟ್ಟಗಳ ರಚನೆ ಅಪೂರ್ವವಾದುದು. ಸಂಕೀರ್ಣ ಗಿರಿ ಶಿಖರಗಳು, ಬೆಸಾಲ್ಟ್ ಸೇರಿದಂತೆ ವಿವಿಧ ಶಿಲೆಗಳಿಂದ ಆವೃತವಾದ ಗುಡ್ಡಗಳ ತವರಿದು. ಆದರೆ, ಇತ್ತೀಚಿನ ವರ್ಷಗಳಲ್ಲಿ ಮುಂಗಾರು ಮಳೆಯ ಅಬ್ಬರ ಶಕ್ತಿಪೀಠದ ಬುನಾದಿಯಲ್ಲೇ ಕಂಪನಗಳನ್ನು ಉಂಟುಮಾಡಿದೆ. ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡ್ಡಗಳು ಕುಸಿಯುವುದು ಪ್ರತಿ ಮಳೆಗಳ ಸಹಜ ವಿದ್ಯಮಾನ ಎನ್ನುವ ಸ್ಥಿತಿ ಸೃಷ್ಟಿಯಾಗುತ್ತಿದೆ.

ಕುಸಿಯುತ್ತಿರುವುದು ಗುಡ್ಡಗಳಷ್ಟೇ ಅಲ್ಲ, ಅವುಗಳ ತಪ್ಪಲಲ್ಲಿ ಬದುಕು ಕಟ್ಟಿಕೊಂಡಿದ್ದ ಜನರ ಬದುಕೂ ಕುಸಿಯುತ್ತಿದೆ. ಮನೆಗಳು ಕುಸಿದು ಬೀಳುತ್ತಿವೆ. ಹೊಲ, ಗದ್ದೆ, ತೋಟ, ಅಡಕೆ, ಕಾಫಿತೋಟಗಳು ಹಾಳಾಗುತ್ತಿವೆ. ಗುಡ್ಡಗಳ ಮಣ್ಣು ನೀರಿನ ಸಂಗಡ ಮಡ್ಡಿಯ ಹೊಳೆಯಾಗಿ ಕೊಚ್ಚಿ ಹೋಗುತ್ತಿದೆ. ಇಂತಹ ದಾರುಣ ಪರಿಸ್ಥಿತಿಯಲ್ಲಿ ದಿಕ್ಕು ಕಾಣದ ಅಸಹಾಯಕರು ಪರಿತಪಿಸುತ್ತಾ, ಚಹರೆ ಕಳೆದುಕೊಂಡ ತಮ್ಮ ಜಮೀನನ್ನು ಹುಡುಕುವಂತಾಗಿದೆ. ಯಾವುದಾದರೂ ವಸ್ತುವನ್ನು ಕಳೆದುಕೊಂಡಾಗ ಅದನ್ನು ಹುಡುಕಬಹುದು. ಆದರೆ, ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ತೋಟವೇ ಕಣ್ಮರೆಯಾದರೆ? ಅಂಥ ಸಂದರ್ಭಗಳಲ್ಲಿ ಭೂಮಿ ತಾಯಿಯನ್ನು ನೆಚ್ಚಿಕೊಂಡವರ ಬದುಕೂ ಬೀದಿಗೆ ಬರುತ್ತದೆ.

ಪಶ್ಚಿಮ ಘಟ್ಟಗಳನ್ನು ಕುವೆಂಪು ‘ಸಹ್ಯಾದ್ರಿ ಶ್ರೇಣಿಗಳು’ ಎಂದು ಹೆಸರಿಸಿದರು. ಸಹ್ಯ ಅಂದರೆ ಗಡುಸು, ಸಹಿಸಿಕೊಳ್ಳಬಲ್ಲ ಎಂದರ್ಥ. ಧಾರಣೆಯ ಶಕ್ತಿಯುಳ್ಳ ಈ ಸಂಕೀರ್ಣ ಶಿಖರ ಶ್ರೇಣಿಗಳು ಬುಡಮೇಲಾಗುತ್ತಿರುವುದು, ತಮ್ಮ ಸಹನಶೀಲತೆಯನ್ನು ಕಳೆದುಕೊಳ್ಳುತ್ತಿರುವುದು ನಾಲ್ಕೈದು ದಶಕಗಳಿಂದ ಈಚೆಗೆ. ಅದಕ್ಕೆ ಮೊದಲು, ಭಾರೀ ಮಳೆ ಬಿದ್ದಾಗಲೂ ಜಗ್ಗದ ಘಟ್ಟಗಳು ಪ್ರಸ್ತುತ ಸಣ್ಣ ಮಳೆಗೂ ಸ್ಪಂದಿಸುತ್ತಿವೆ. ಘಟ್ಟದ ಕೆಲವು ಪ್ರದೇಶಗಳು ಹಲಸಿನ ಹಣ್ಣು ಹಿಸಿದಹಾಗೆ, ಕಲಸಿದ ಮಣ್ಣಿನ ಮಡ್ಡಿಮಯವಾಗುತ್ತಿವೆ.

ಕಳೆದ ವರ್ಷದ ತಲಕಾವೇರಿಯಲ್ಲಿ ಸಂಭವಿಸಿದ ಘಟ್ಟದ ಕುಸಿತದಲ್ಲಿ ಅರ್ಚಕರ ಕುಟುಂಬವೊಂದು ಮಣ್ಣಿನಲ್ಲಿ ಹೂತುಹೋಗಿತ್ತು. 2019ರ ಆಗಸ್ಟ್ ತಿಂಗಳನ್ನು ನೆನಪಿಸಿಕೊಂಡರೆ, ಮಡಿಕೇರಿ, ಸುಬ್ರಮಣ್ಯ ಸೇರಿದಂತೆ ಪಶ್ಚಿಮಘಟ್ಟದ ಸುಮಾರು 40 ಸ್ಥಳಗಳಲ್ಲಿ ಘಟ್ಟ ಕುಸಿದು ಮಡ್ಡಿಯ ಹೊಳೆ ಹರಿದಿತ್ತು. 2018ರಲ್ಲೂ ಅತಿವೃಷ್ಟಿ ಪಶ್ಚಿಮ ಘಟ್ಟದಲ್ಲಿ ಕಂಪನಗಳನ್ನು ಉಂಟುಮಾಡಿತ್ತು. ಕೊಡಗು, ಚಿಕ್ಕಮಗಳೂರು ಮುಂತಾದೆಡೆ ಘಟ್ಟ ಪ್ರದೇಶ ಕುಸಿದು ಅಪಾರ ಸಾವುನೋವು ಉಂಟಾಗಿತ್ತು. ಈ ವರ್ಷ ಜುಲೈನಲ್ಲೇ ಮಳೆಯ ಅನಾಹುತದ ಚಿತ್ರಗಳು ವರದಿಯಾಗುತ್ತಿವೆ. ಅಂದಹಾಗೆ, ಇದೆಲ್ಲ ಅನಾಹುತಗಳು ಸಂಭವಿಸುತ್ತಿರುವುದು ಏಕೆ?

ಪಶ್ಚಿಮ ಘಟ್ಟಗಳ ಬದಲಾದ ಸ್ಥಿತಿಗತಿಗೆ ಕಾರಣ ಕಂಡುಕೊಳ್ಳಲು ಪರಿಸರ ತಜ್ಞರು, ವಿಜ್ಞಾನಿಗಳು ದಿಣ್ಣೆ ಹತ್ತಿ ಕಣಿವೆಗೆ ಇಳಿದಿದ್ದಾರೆ. ವೈಜ್ಞಾನಿಕ ಉಪಕರಣಗಳೊಂದಿಗೆ ಗುಡ್ಡಗಳ ಬುಡಗಳನ್ನು ಕೆದಕಿ ಬೆದಕಿ ಜಾಲಾಡಿದ್ದಾರೆ. ಗುಡ್ಡಗಳ ಜಠರವನ್ನು ಪರಿಶೀಲಿಸಿದ್ದಾರೆ. ಉಪಗ್ರಗಳ ಸಹಾಯ ಯಾಚಿಸಿದ್ದಾರೆ. ಈ ಎಲ್ಲ ಅಧ್ಯಯನಗಳ ಸಾರಾಂಶ ಒಂದೇ. ಪಶ್ಚಿಮ ಘಟ್ಟಗಳ ಆರೋಗ್ಯ ಮೊದಲಿನಂತಿಲ್ಲ. ಹಾಗಾಗಿ, ಘಟ್ಟ ಪ್ರದೇಶದ ಜನರ ಹಿತಾಸಕ್ತಿ ಕಾಪಾಡುವುದರೊಂದಿಗೆ ಪಶ್ಚಿಮಘಟ್ಟಗಳನ್ನು ಸಂರಕ್ಷಿಸುವ ಸವಾಲೂ ನಮ್ಮೆದುರಿಗಿದೆ.

ಸಂಕಷ್ಟದ ಸಮಯದಲ್ಲಿ ಸರ್ಕಾರ ಜನರನ್ನು ಸುರಕ್ಷಿತ ಸ್ಥಳಕ್ಕೆ ಸಾರಾಗವಾಗಿ ಸಾಗಿಸಬಹುದು.

ಸ್ವರ್ಗಕ್ಕೆ ಹಚ್ಚಿದ ಏಣಿಗಳು.. ನಯನಮನೋಹರವಾದ ಗಿರಿಶೃಂಗಗಳು ಪಶ್ಚಿಮಘಟ್ಟದ ಔನ್ನತ್ಯವನ್ನು ಸಾರುವಂತಿವೆ. ಸೃಷ್ಟಿಯ ಬೆರಗು – ಬೆಡಗುಗಳೆರಡೂ ಮೇಳೈಸಿರುವ ಈ ಸುಂದರ ತಾಣಗಳು ಮನುಷ್ಯನ ಹಸ್ತಕ್ಷೇಪದಿಂದ ನಾಶದತ್ತ ಸಾಗಿವೆ

